# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಗುರುಮೂರ್ತಿ ಕುಲಕರ್ಣಿ | **ಪಿಡಬ್ಲ್ಯೂ.13** |
| **ತಂದೆಯ ಹೆಸರು** | : | ರಾಮಚಂದ್ರ ಕುಲಕರ್ಣಿ | **ಸಿಡಬ್ಲ್ಯೂ.29** |
| **ವಯಸ್ಸು** | : | **60 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ನಿವೃತ್ತ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು , ಚಿತ್ರದುರ್ಗ | **ದಿನಾಂಕ: 11.12.2018** |
| **ವಾಸಸ್ಥಳ** | : | ವಿನೋಭ ನಗರ , ಶಿವಮೊಗ್ಗ | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

ಜುಲೈ –2014 ತಿಂಗಳಲ್ಲಿ ನಾನು ಚಿತ್ರದುರ್ಗದ ಆರ್.ಟಿ.ಒ . ಕಚೇರಿಯಲ್ಲಿ ಪ್ರಭಾರೆಯಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಆ ಸಮಯದಲ್ಲಿ ದಿ: **07.06.2014** ರಂದು ಲೋಕಾಯುಕ್ತ ಪೊಲೀಸರು ನಮ್ಮ ಕಚೇರಿಗೆ ಪತ್ರ ಬರೆದು ಆರೋಪಿ ರಾಜಣ್ಣ ಹೆಸರಿನಲ್ಲಿ ರುವ ಆರ್ ಸಿ ವಾಹನ ನಂ ಕೆಎ–**16**–ಡಬ್ಲ್ಯೂ–**8697** ಇದನ್ನು ಖರೀದಿ ಮಾಡಲು ಎಷ್ಟು ಖರ್ಚು ಆಗಿದೆ , ಅದಕ್ಕೆ ಇಂಧನ ಎಷ್ಟು ಖರ್ಚು ಮಾಡಲಾಗಿದೆ ಅಂತ ವಿವರ ಕೇಳಿದ್ದರು . ಆ ಪ್ರಕಾರ ನಮ್ಮ ಕಚೇರಿಯಲ್ಲಿರುವ ಆರ್.ಸಿ ದಾಖಲೆ ನೋಡಲಾಗಿ ಸದರಿ ಮೋಟಾರ್ ಸೈಕಲ್ **2012** ರಲ್ಲಿ ಆರೋಪಿ ರಾಜಣ್ಣ ತಂದೆ ದ್ಯಾಮಣ್ಣ ಹೆಸರಿನಲ್ಲಿತ್ತು . ಅದನ್ನು ದಿ: **07.06.2012** ರಂದು ನೋಂದಣಿಯಾಗಿದ್ದು , ಅದು **2012** ರ ಮಾಡೆಲ್ ಆಗಿದ್ದು , ಅದನ್ನು ರೂ. **47,576/–** ಹಣಕ್ಕೆ ಚಿತ್ರದುರ್ಗದ ಹಿರೋ ಹೊಂಡಾ ಶೋರೂಂ ನಿಂದ ಖರೀದಿ ಮಾಡಿರುತ್ತಾರೆ . ಅದನ್ನು ನೋಂದಣಿ ಮಾಡಲು ರೂ. **5,285/–** ಮತ್ತು ಫೀ ರೂ.**197/–** ಕಟ್ಟಿರುತ್ತಾರೆ . ಅಂದರೆ ಒಟ್ಟು ರೂ. **5,482/–** ಪಾವತಿ ಮಾಡಿರುತ್ತಾರೆ . ಸದರಿ ಮೊಟರ್ ಸೈಕಲ್ **2012** ರಿಂದ ನಾನು

ಪತ್ರ ಬರೆಯುವವರೆಗೆ ಒಟ್ಟು **14,195** ಕಿಮೀ ಓಡಿದೆ . ಅಲ್ಲದೇ ಇಂಧನ ವೆಚ್ಚ ರೂ.**13,914/–** + ರೂ.**1000/–** ಸರ್ವೀಸ್ ಚಾರ್ಜ್ ಅಂತ ಖರ್ಚು ಮಾಡಿರುತ್ತಾರೆ . ಅಂದರೆ ಒಟ್ಟು ಈ ಕೆಳಗಿನಂತಿರುತ್ತದೆ .

| ಕ್ರ. ಸಂ. | ಖರ್ಚು ಮಾಡಿದ ವಿವರ | ಖರ್ಚು ಮಾಡಿದ ಮೊತ್ತ ರೂ. |
|---|---|---|
| 1 | ವಾಹನ ಶೋರೂಮಿನಿಂದ ಖರೀದಿ ಮಾಡಿದ್ದು | 47,576/- |
| 2 | ಟ್ಯಾಕ್ಸ್ | 5,285/- |
| 3 | ಫೀ ಶುಲ್ಕ | 197/- |
| 4 | ಇಂಧನ ವೆಚ್ಚ | 13,914/- |
| 5 | ನಿರ್ವಹಣಾ ವೆಚ್ಚ | 1,000/- |
| | ಒಟ್ಟು | 67,972/- |

ಈ ದಿಸೆಯಲ್ಲಿ ಪೊಲೀಸರು ಕೊಟ್ಟ ಪತ್ರ ಗುರುತಿಸುತ್ತೇನೆ. ಅದನ್ನು ನಿಪಿ–19 ಅಂತ ಗುರುತಿಸಲಾಯಿತು . ಜ್ಞಾಪನ ಪತ್ರ , ನಾನು ಕೊಟ್ಟ ವರದಿ ಗುರುತಿಸುತ್ತೇನೆ . ಅವುಗಳನ್ನು ನಿಪಿ–20 , 21 ಅಂತ ಗುರುತಿಸಲಾಯಿತು . ಸೀನಿಯರ್ ಇನ್ಸ್ ಪೆಕ್ಟರ್ ಕೊಟ್ಟ ವರದಿ ಗುರುತಿಸುತ್ತೇನೆ . ಅದನ್ನು ನಿಪಿ–22 ಅಂತ ಗುರುತಿಸಲಾಯಿತು . ಬಿ ಎಕ್ಸ್ ಟ್ರಾಕ್ಟ್ ಮತ್ತು ಇತರೆ ದಾಖಲೆಗಳನ್ನು ನಿಪಿ–23 ಅಂತ ಗುರುತಿಸಲಾಯಿತು .

## ಆರೋಪಿತರ ಪರ ಶ್ರೀ ಎಸ್.ಹೆಚ್. ವಕೀಲರಿಂದಃ ಪಾಟೀ ಸವಾಲುಃ

ಸದರಿ ವಾಹನ ನಂ ಕೆಎ–16–ಡಬ್ಲ್ಯೂ–8697 ನೇದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ . ನಮ್ಮ ಹಿರಿಯ ಮೋಟರ್ ವಾಹನ ನಿರೀಕ್ಷಕರು ಕೊಟ್ಟಂತಹ ನಿಪಿ–22 ವರದಿ ಸರಿ ಇದೆಯೋ ತಪ್ಪಿದೆಯೋ ಅಂತ ನನಗೆ ಹೇಳಲು ಬರುತ್ತದೆ . ಅದನು ಸರಿ ಇರುವುದಿಲ್ಲ ಎನ್ನುವುದು ಸುಳ್ಳು . ಸಾಮಾನ್ಯವಾಗಿ ವಾಹನವನ್ನು ಚೆನ್ನಾಗಿ ನೋಡಿಕೊಂಡರೆ ಇಂಧನ ವೆಚ್ಚ ಕಡಿಮೆ ಬರುತ್ತದೆ ಎನ್ನುವುದು ನಿಜ . ನಾನು ಹೆಚ್ಚಿನ ಖರ್ಚು ತೋರಿಸಲು ಲೋಕಾಯುಕ್ತರ ಮಾತು ಕೇಳಿ ವಾದಿ ಕೊಟ್ಟಿದ್ದೇನೆ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.